1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 05.04.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-29 Pw-22

ಹೆಸರು : ನಾಗರಾಜು ಕೆ
ತಂದೆಯ ಹೆಸರು : ಲೇ. ಜಿ ಕೆಂಪಯ್ಯ
ವಯಸ್ಸು : 36 ವರ್ಷ
ಉದ್ಯೋಗ : ಹೆಚ್‌ಸಿ ನಂಬರ್. 430
ಕುದೂರು ಪೊಲೀಸ್ ಠಾಣೆ
ವಾಸಸ್ಥಳ : ಕುದೂರು

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಸನ್ 2015 ರಿಂದ 2019 ರವರೆಗೆ ನಾನು ಮಾಗಡಿ ವೃತ್ತ ಪೊಲೀಸ್ ನಿರೀಕ್ಷಕರ ಕಚೇರಿಯಲ್ಲಿ ಪಿಸಿ ನಂಬರ್ 395 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ದಿಃ17.10.2016 ರಂದು ಚಾಸಾ.35 ಇವರ ಜೊತೆಗೆ ನಾನು, ಚಾಸಾ.30, 32, ಮತ್ತು 34 ಇವರನ್ನು ಕರೆದುಕೊಂಡು ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಆರೋಪಿತರ ಕುರಿತು ಮಾಹಿತಿ ಸಂಗ್ರಹಿಸಿ ತಲಾಶೆ ಮಾಡಿ ನೋಡಲಾಗಿ ಅವರು ಸಿಗದೇ ಇದ್ದುದ್ದರಿಂದ ಕೊನೆಗೆ ಬೆಂಗಳೂರಿನ ನಾಗರಬಾವಿಯ ಕಾಂಪ್ಲೆಕ್ಸ್ ಬಳಿ ಆರೋಪಿತರು ಇರುತ್ತಾರೆಂದು ಖಚಿತವಾದ ಮಾಹಿತಿ ದೊರೆತ ಮೇರೆಗೆ ಸಾಯಂಕಾಲ

ಸುಮಾರು 5.00 ಗಂಟೆ ಸಮಯಕ್ಕೆ ಅಲ್ಲಿಗೆ ಹೋಗಿ 1ನೇ ಮತ್ತು 2ನೇ ಆರೋಪಿತರು ಅವರೊಂದಿಗೆ ಇನ್ನುಳಿದ 6 ಜನ, ಹೀಗೆ ಒಟ್ಟು 8 ಜನರನ್ನು ವಶಕ್ಕೆ ಪಡೆದುಕೊಂಡು ರಾತ್ರಿ 9.00 ಗಂಟೆಗೆ ಮಾಗಡಿ ಸಿಪಿಐ ಕಚೇರಿಗೆ ಕರೆದುಕೊಂಡು ಬಂದು ಹಾಜರುಪಡಿಸಿರುತ್ತೇವೆ.

3. 1ನೇ ಮತ್ತು 2ನೇ ಆರೋಪಿತರ ಜೊತೆಗೆ ಇದ್ದ 6 ಜನರ ಹೆಸರು ಒಬ್ಬ ಪ್ರತಾಪ್, ಆರೋಪಿ ನಂಬರ್ 4, 6, 8, 10 ಮತ್ತು 11 ಆಗಿರುತ್ತಾರೆ.

4. ಸದರಿಯವರನ್ನು ನೋಡಿದಲ್ಲಿ ನಾನು ಗುರುತಿಸುತ್ತೇನೆ.

5. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ 1ನೇ ಮತ್ತು 2ನೇ ಆರೊಪಿತರನ್ನು ನೋಡಿ ಗುರುತಿಸುತ್ತಿದ್ದೇನೆ.

6. ಇನ್ನುಳಿದ ಆರೋಪಿಗಳನ್ನು ನೋಡಿ ಗುರುತಿಸಲು ಆಗುವುದಿಲ್ಲ.

ಪಾಟೀ ಸವಾಲುಃ ಶ್ರೀ. ಆರ್.ಕೆ., ವಕೀಲರಿಂದ ಆರೋಪಿಗಳ ಪರವಾಗಿಃ

7. ಆದಿನ ನಾವು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಜೀಪ್ ನಂಬರ್. ಕೆಎ-42, ಜಿ73ನಲ್ಲಿ ಹೊರಟಿರುತ್ತೇವೆ.

8. ಚಾಸಾ.34 ಇವರಿಗೆ ತಾವರೆಕೆರೆ ಠಾಣೆಯಿಂದ ಆದಿನ ಕರೆದುಕೊಂಡು ಹೋಗಿದ್ದೆವು.

9. ಮೊದಲಿಗೆ ನಾವು ಕಾಮಾಕ್ಷಿಪಾಳ್ಯಕ್ಕೆ ಹೋಗಿರುತ್ತೇವೆ.

10. ಆಗ ಸಮಯ 11.30-12.00 ಗಂಟೆ ಆಗಿತ್ತು.

11. ನಂತರ, ಯಗ್ಗನಹಳ್ಳಿ ಕಡೆಗೆ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಹೋಗಿದ್ದೆವು.

12. ನಾಗರಬಾವಿ ಹತ್ತಿರ ನಾವು ಹೋದ ಜಾಗ ಎಲ್ಲಾ ಸಮಯದಲ್ಲಿಯೂ ಸಹ ಜನಸಂದಣಿಯಿಂದ ಕೂಡಿರುವಂತಹ ಸ್ಥಳವಾಗಿರುತ್ತದೆ ಎನ್ನುವುದು ಸರಿ.

13. ಆ ಜಾಗದಲ್ಲಿ ಸಾಕಷ್ಟು ಅಂಗಡಿ-ಮುಂಗಟ್ಟುಗಳು ಇರುತ್ತವೆ ಎನ್ನುವುದು ಸರಿ.

14. ಅದರಂತೆ, ಅಲ್ಲಿ ನಿರಂತರವಾಗಿ ವಾಹನ ಸಂಚಾರವಿರುತ್ತದೆ ಎನ್ನುವುದು ಸರಿ.

15. ಜನಸಂದಣಿ ಮತ್ತು ವಾಹನ ಸಂಚಾರ ಸಾಕಷ್ಟು ಇದ್ದುದ್ದರಿಂದ ಅಲ್ಲಿ ಯಾವುದೇ ವ್ಯಕ್ತಿಗೆ ಅಷ್ಟು ಸುಲಭವಾಗಿ ಗುರುತಿಸಲು ಆಗುವುದಿಲ್ಲ ಎನ್ನುವುದು ಸರಿಯಲ್ಲ.

16. ಆ ಪೂರ್ವದಲ್ಲಿ ನಾವು ವಶಕ್ಕೆ ಪಡೆದುಕೊಂಡಿದ್ದ ಸದರಿ 8 ಜನರನ್ನು ನೋಡಿರಲಿಲ್ಲ.

17. ಯಾರು ಯಾರನ್ನು ಹಿಡಿದುಕೊಂಡಿರುತ್ತೇವೆ ಎಂದು ಪ್ರಶ್ನಿಸಿದರೆ, ಎಲ್ಲರೂ ಸೇರಿ ಹಿಡಿದುಕೊಂಡಿರುತ್ತೇವೆ ಎಂದು ಹೇಳುತ್ತೇನೆ.

18. ಸದರಿ ಜಾಗದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ.

19. ಸದರಿ ಜಾಗದಲ್ಲಿ ಚಾಸಾ.35 ಯಾವುದೇ ಬರವಣಿಗೆಯನ್ನು ಮಾಡಿರಲಿಲ್ಲ.

20. ಆದಿನ ನಾವು ಹೋಗಿರಲಿಲ್ಲ ಮತ್ತು ಯಾವುದೇ ಆರೋಪಿತನನ್ನು ದಸ್ತಗಿರಿ ಮಾಡಿರಲಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.